ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 678 ವೆಚ್ಚ-8/2018
ಲಗತ್ತು:- 02 ಪುಟಗಳು

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:25.06.2018.

## "ಆಯವ್ಯಯ ತುರ್ತು"

### ಅನಧಿಕೃತ ಟಿಪ್ಪಣಿ

ವಿಷಯ:- ಶಿಕ್ಷಣ ಇಲಾಖೆಯಡಿ ತೆರೆದಿರುವ ಎಲ್ಲಾ ಪಿ.ಡಿ ಖಾತೆ ಹಾಗೂ ಬ್ಯಾಂಕ್ ಖಾತೆಗಳ ವಿವರಗಳನ್ನು ಒದಗಿಸುವ ಬಗ್ಗೆ.

ಉಲ್ಲೇಖ:- ಟಿಪ್ಪಣಿ ಸಂಖ್ಯೆ: ಆಇ 387 ಆನಿ 2018, ದಿನಾಂಕ:24.06.2018

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಟಿಪ್ಪಣಿಯಲ್ಲಿ ಎಲ್ಲಾ ಇಲಾಖೆಗಳು ಹೊಂದಿರುವ ಬ್ಯಾಂಕ್ ಖಾತೆಗಳ ವಿವರಗಳನ್ನು ಸಲ್ಲಿಸಲು ತಿಳಿಸಿದೆ. ಆದ್ದರಿಂದ ತಮಗೆ ಸಂಬಂಧಿಸಿದ ಇಲಾಖೆ ಹಾಗೂ ನಿಗಮ/ಮಂಡಳಿಗಳಲ್ಲಿ ತೆರೆದಿರುವ ಎಲ್ಲಾ ಪಿ.ಡಿ. ಖಾತೆ ಹಾಗೂ ಬ್ಯಾಂಕ್ ಖಾತೆಗಳ ವಿವರಗಳನ್ನು ಇದರೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ಭರ್ತಿ ಮಾಡಿ 02 ದಿನಗಳ ಒಳಗೆ ಸಲ್ಲಿಸುವಂತೆ ತಿಳಿಸಿದೆ.

(ಸರ್ಕಾರದ ಜಂಟಿ ಕಾರ್ಯದರ್ಶಿ2,
ಆರ್ಥಿಕ ಇಲಾಖೆ ಇವರಿಂದ ಅನುಮೋದಿತ)

(ರೇವಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವೆಚ್ಚ-7&8)

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ).

Recieved on 25/06/2018 at 5:28 pm

26/6/18 A-2 IFA DTE CCE HoDs PSED

ಸಂಖ್ಯೆ: ಆಇ 387 ಆನಿ 2018

ಆರ್ಥಿಕ ಇಲಾಖೆ (ಆನಿ) ಶಾಖೆ
ದಿನಾಂಕ:24-06-2018

## ಟಿಪ್ಪಣಿ

ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ: ಆಇ 1 ಟಿಎಫ್‌ಸಿ 2009, ದಿನಾಂಕ:31-01-2009ರ ಸಂಚಿತ ನಿಧಿಯಿಂದ ಹಣವನ್ನು ಸೆಳೆದು ಇಲಾಖಾಧಿಕಾರಿಗಳ ಪಿ.ಡಿ. ಖಾತೆಯಲ್ಲಿ ಅಥವಾ ಬ್ಯಾಂಕ್ ಖಾತೆಯಲ್ಲಿ ಇಡುವುದನ್ನು ನಿರ್ಬಂಧಿಸಿರುತ್ತದೆ. ಹಾಗಿದ್ದರೂ ಕೆಲವು ಯೋಜನಾ ಮಾರ್ಗಸೂಚಿಗಳಲ್ಲಿ ಹಾಗೂ ಭಾರತ ಸರ್ಕಾರದ ನಿರ್ದೇಶನಗಳಂತೆ ಬ್ಯಾಂಕ್ ಖಾತೆಗಳ ಮೂಲಕ ಯೋಜನೆಗಳನ್ನು ಅನುಷ್ಠಾನಗೊಳಿಸುವುದು ಅಗತ್ಯವಿರುವ ಸಂದರ್ಭದಲ್ಲಿ ಹಾಗೂ ಕೆಲವೊಂದು ವಿಶಿಷ್ಟ ಸಂದರ್ಭಗಳಲ್ಲಿ ಪಿ.ಡಿ. ಖಾತೆ ಅಥವಾ ಬ್ಯಾಂಕ್ ಖಾತೆ ನಿರ್ವಹಿಸಲು ಆರ್ಥಿಕ ಇಲಾಖೆಯು ಅನುಮತಿಸಿರುತ್ತದೆ.

ಆದರೆ, ಕೆಲವು ಇಲಾಖೆಗಳು ಆರ್ಥಿಕ ಇಲಾಖೆಯ ಗಮನಕ್ಕೆ ತರದೆ ಬ್ಯಾಂಕ್ ಖಾತೆಗಳನ್ನು ತೆರೆದು ಸರ್ಕಾರಿ ಮೊತ್ತಗಳನ್ನು ಜಮೆ ಮಾಡಿಕೊಂಡಿದ್ದು ಇದರಿಂದ ಸಂಚಿತ ನಿಧಿಯಿಂದ ಹಣವು ಸೋರಿಕೆಯಾಗುವಂತಾಗಿದೆ. ಈ ಹಿನ್ನಲೆಯಲ್ಲಿ ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: 05 ಟಿಎಆರ್ 2017, ದಿನಾಂಕ:30-01-2017ರಲ್ಲಿ ಬ್ಯಾಂಕ್ ಖಾತೆಗಳನ್ನು ತೆರೆಯುವ ಹಾಗೂ ನಿರ್ವಹಿಸುವ ಬಗ್ಗೆ ಮಾರ್ಗಸೂಚಿಗಳನ್ನು ಹೊರಡಿಸಿರುತ್ತದೆ. ಈ ಆದೇಶದಲ್ಲಿ ಎಲ್ಲಾ ಇಲಾಖೆಗಳು ಹೊಂದಿರುವ ಬ್ಯಾಂಕ್ ಖಾತೆಗಳ ವಿವರಗಳನ್ನು ಸಲ್ಲಿಸಲು ತಿಳಿಸಿದೆ.

ಆದ್ದರಿಂದ, ತಮಗೆ ಸಂಬಂಧಿಸಿದ ಇಲಾಖೆ ಹಾಗೂ ನಿಗಮ/ಮಂಡಳಿಗಳಲ್ಲಿ ತೆರೆದಿರುವ ಎಲ್ಲಾ ಪಿ.ಡಿ. ಖಾತೆ ಹಾಗೂ ಬ್ಯಾಂಕ್ ಖಾತೆಗಳ ವಿವರಗಳನ್ನು ಇದರೊಂದಿಗೆ ಲಗತ್ತಿಸಿರುವ ನಮೂನೆಯಂತೆ ಎರಡು ದಿನಗಳೊಳಗಾಗಿ ಪಡೆದು ಸಲ್ಲಿಸುವಂತೆ ತಿಳಿಸಿದೆ.

(ಪವನ್ ಕುಮಾರ್ ಮಾಲಪಾಟಿ)
ಸರ್ಕಾರದ ಉಪ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಆ ಮತ್ತು ಸಂ)

ಆರ್ಥಿಕ ಇಲಾಖೆಯ ಎಲ್ಲಾ ಜಂಟಿ ಕಾರ್ಯದರ್ಶಿಗಳು/ಉಪ ಕಾರ್ಯದರ್ಶಿಗಳು.

Clink Link to fill details https://goo.gl/forms/PLJRWHvxh7HPdetm1

## Format for Annual Disclosure of the Existing Bank Accounts of Government Departments/Other Bodies.

| Sl No | Account No | Name of the Bank | Type of Account & | year of opening | Purpose of opening account | Balance on 31st May |
|---|---|---|---|---|---|---|
| 1 | 2 | 3 | 4 | 5 | 6 | 7 |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |